# ಒಂಟಿಕಣ್ಣಿನ 'ಟೈಗರ್'

■ ಡಿ.ಗರುಡ



ಸಹ ಆಟಗಾರರ ಮನಸು ಗೆದ್ದ ನಾಯಕ, ಏಕಾಕ್ಷನಾಗಿಯೂ ಪ್ರೇಕ್ಷಕರ ಮನ ತಟ್ಟುವಂಥ ಆಟವಾಡಿದ ಬ್ಯಾಟ್ಸ್‌ಮನ್, ಅರವತ್ತರ ದಶಕದಲ್ಲಿ ಬೆಡಗಿಯರ ಎದೆಯೊಳಗೆ ಮನೆ ಮಾಡಿದ ಕ್ರಿಕೆಟಿಗ...!

–ಹೌದು; ಇದು 'ಟೈಗರ್' ಎಂದೇ ಖ್ಯಾತಿ ಗಳಿಸಿದ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಮನ್ಸೂರ್ ಅಲಿ ಖಾನ್ ಪಟೌಡಿ ವಿಶಿಷ್ಟ ವ್ಯಕ್ತಿತ್ವವನ್ನು ಬಿಂಬಿಸುವ ಅಂಶಗಳು.

ಸನ್‌ಗ್ಲಾಸ್ ಹಾಕಿಕೊಂಡು ಟಿಪ್‌ಟಾಪ್ ಸೂಟ್ ಹಾಕಿಕೊಂಡು ಡಿಗ್ಜಾಮ್ ಜಾಹೀರಾತಿನಲ್ಲಿ ಗತ್ತಿನಿಂದ ಕಾಣಿಸಿಕೊಂಡಿದ್ದ ಈ ಕ್ರಿಕೆಟಿಗನ ಚಿತ್ರ ಇನ್ನೂ ಮನದಲ್ಲಿ ಅಚ್ಚಾಗಿದೆ. ಎರಡು ದಶಕಗಳ ಹಿಂದೆ ನಿತ್ಯವೂ ಪತ್ರಿಕೆಗಳ ಹಾಗೂ ಟೆಲಿವಿಷನ್ ಜಾಹೀರಾತುಗಳಲ್ಲಿ ಹೊಳೆಯುತ್ತಿದ್ದ ಟೈಗರ್ ಕೊನೆಯವರೆಗೂ ತಮ್ಮ ಆಕರ್ಷಕ ವ್ಯಕ್ತಿತ್ವದಿಂದ ಗಮನ ಸೆಳೆದವರು. ಆದ್ದರಿಂದಲೇ ಇತ್ತೀಚೆಗೆ ಕೂಡ ಅವರು ಗೋಲ್ಡ್ ಕಾಫಿ ಜಾಹೀರಾತಿನಲ್ಲಿಯೂ ಮಿಂಚಿದ್ದು.



ಯುವಕರಾಗಿದ್ದಾಗ ಕಾರು ಅಪಘಾತದಲ್ಲಿ ಒಂದು ಕಣ್ಣು ಕಳೆದುಕೊಂಡರೂ ಅವರ ವ್ಯಕ್ತಿತ್ವದ ಆಕರ್ಷಣೆ ಮಾತ್ರ ಕುಂದಲಿಲ್ಲ. ಅಂದದಿಂದ ಬ್ಯಾಟಿಂಗ್ ಮಾಡುತ್ತಿದ್ದ ಪಟೌಡಿ ಮುಖದ ತುಂಬಾ ಅರಳುತ್ತಿದ್ದ ಮಂದಹಾಸ ನೋಡುವುದೇ ಚೆಂದ! ಯಾರನ್ನಾದರೂ ಸೆಳೆದು ಬಿಗಿದಪ್ಪಿ ಹಿಡಿದಿಡುವಂಥ ನಗುಮೊಗವದು. ಗಾಂಭೀರ್ಯದ ನಡುವೆ ಹೊಳೆಯುವ ಕಿರುನಗೆಗೆ ರತ್ನದಂಥ ಬೆಲೆ.

ಇದೇ ಆಕರ್ಷಣೆಯ ಸೆಳೆತದಲ್ಲಿ ಸಿಕ್ಕಿಕೊಂಡರು ಗುಳಿಕೆನ್ನೆಯ ಬಂಗಾಲಿ ಬೆಡಗಿ ಶರ್ಮಿಳಾ ಟ್ಯಾಗೋರ್. ಅದ್ಭುತ ನಟನೆಯಿಂದ ಕೋಟಿ ಕೋಟಿ ಅಭಿಮಾನಿಗಳನ್ನು ಗಳಿಸಿದ್ದ ಬಾಲಿವುಡ್ ಬಾಲೆಯ ಮನದಲ್ಲಿ ಪ್ರವೇಶ ಮಾಡಿದ್ದ 'ಟೈಗರ್' ಅಲ್ಲಿಯೇ ಪ್ರೀತಿಯ ಗುಹೆಯನ್ನು ಕಟ್ಟಿಕೊಂಡು ವಾಸ ಮಾಡಿಬಿಟ್ಟರು. ಆದರೆ ಹಾಗೆ ಮಾಡುವುದು ಸುಲಭವೇನೂ ಆಗಿರಲಿಲ್ಲ.

ಅರವತ್ತರ ದಶಕದ ಹೀರೋಗಳ ಹಾಗೆಯೇ ಪಟೌಡಿ ಅವರು ಶರ್ಮಿಳಾ ಬೆನ್ನ ಹಿಂದೆ ಹೂವು ಹಿಡಿದು ಸುತ್ತಬೇಕಾಗಿತ್ತು. ಶರ್ಮಿಳಾ ಹಾಗೂ ಟೈಗರ್ ಮೊದಲ ಭೇಟಿಯಾಗಿದ್ದು 1965ರಲ್ಲಿ. ನವದೆಹಲಿಯಲ್ಲಿ ನಡೆದಿದ್ದ ಒಂದು ಸಮಾರಂಭದಲ್ಲಿ ಮುಖಾಮುಖಿಯಾದಾಗ ಕಣ್ಣುಗಳ ಕಿಟಕಿಯಿಂದ ಮನದಾಳಕ್ಕೆ ಇಳಿದಿದ್ದರು ಶರ್ಮಿಳಾ. ಅಲ್ಲಿ ಅಂಕುರಿಸಿದ ಪ್ರೇಮ ಪಯಣವು ಮದುವೆಯಲ್ಲಿ ಕೊನೆಯಾಗಲು ನಾಲ್ಕು ವರ್ಷಗಳ ಕಾಲ ಕಾಯಬೇಕಾಯಿತು!

ಗುಲಾಬಿ ಹೂವು ಹಿಡಿದು ಉಡುಗೊರೆಗಳ ಜೊತೆಗೆ ಶರ್ಮಿಳಾ ಮುಂದೆ ಪಟೌಡಿ ಹಾಜರಾಗಿದ್ದಕ್ಕೆ ಲೆಕ್ಕವಿಲ್ಲವಂತೆ. ತಮ್ಮ ಹಿಂದೆ ಬಿದ್ದಿದ್ದ ಎಲ್ಲ ಬೆಡಗಿಯರನ್ನು ಬಿಟ್ಟು ಶರ್ಮಿಳಾಗೆ ಹೂವು ಕೊಟ್ಟಿದ್ದ ಪಟೌಡಿ ಪ್ರೇಮ ಸಾಹಸ ಸಾರ್ಥಕವೂ ಆಯಿತು. ಕವಿ ರವೀಂದ್ರನಾಥ್ ಟ್ಯಾಗೋರ್ ಮನೆತನದ ಹುಡುಗಿ ಅಂದು ಟೈಗರ್ ಕೈಹಿಡಿದಾಗ ಅದೊಂದು ಬ್ರೇಕಿಂಗ್ ನ್ಯೂಸ್! ಉಭಯ ಕುಟುಂಬಗಳ ವಿರೋಧ ತಣ್ಣಗಾಗಿ ಮದುವೆಯೂ ನಡೆಯಿತು. 1969ರಲ್ಲಿ ಪಟೌಡಿ ಬಾಳ ಸಂಗಾತಿಯಾದ ಶರ್ಮಿಳಾ ಇಸ್ಲಾಂ ಧರ್ಮ ಸ್ವೀಕರಿಸಿ ಆಯೇಷಾ ಸುಲ್ತಾನಾ ಆದರು. ಆದರೆ ಜನರ ಮನದಲ್ಲಿ ಮಾತ್ರ ಶರ್ಮಿಳಾ ಆಗಿಯೇ ಉಳಿದರು.

ಪ್ರೇಮ ವಿವಾಹದ ನಂತರ ಪಟೌಡಿ ಮತ್ತು ಶರ್ಮಿಳಾ ಜೀವನ ಅತ್ಯಂತ ಸುಂದರ ಕನಸಾಯಿತು. ಅದೇ ವಿಶೇಷ. ಪ್ರಾಮಾಣಿಕ ಪತಿ ಎನಿಸಿದರು ಟೈಗರ್. ಯಾವುದೇ ಕೌಟುಂಬಿಕ ವಿವಾದಗಳಿಗೆ ಅವಕಾಶ ನೀಡಲಿಲ್ಲ. ಪಟೌಡಿ ಎಲ್ಲಿಯೋ ಶರ್ಮಿಳಾ ಅಲ್ಲಿ ಎಂದು ಹೇಳುವ ಮಟ್ಟಿಗೆ ಇಬ್ಬರೂ ಎಲ್ಲ ಸಮಾರಂಭಗಳಲ್ಲಿ ಜೊತೆಯಾಗಿ ಕಾಣಿಸಿಕೊಳ್ಳುತ್ತಿದ್ದರು. ಅದು ಮನ್ಸೂರ್ ಅಲಿ ಪಾಲಿಸಿದ ಪತಿಧರ್ಮ.

ಶಿಸ್ತಿನ ಜೀವನ ನಡೆಸಿದ ಪಟೌಡಿ ಬಾಲ್ಯದಿಂದಲೇ ತುಂಬ ಚಟುವಟಿಕೆಯವ. ಅದೇ ಕಾರಣಕ್ಕೆ ಅವರನ್ನು ಮನೆಯವರೆಲ್ಲ 'ಟೈಗರ್' ಎಂದು ಕರೆಯುತ್ತಿದ್ದರು. ಕ್ರಿಕೆಟ್ ಕ್ಷೇತ್ರವನ್ನು ಪ್ರವೇಶಿಸಿದ ನಂತರ ಅದೇ ಉಪಮೆ ಅವರ ಹೆಸರಿನೊಂದಿಗೆ ಸೇರಿಕೊಂಡುಬಿಟ್ಟಿತು. ಹೆಚ್ಚು ಕಾಲ ಕ್ರಿಕೆಟ್ ಆಡದಿದ್ದರೂ ಆಡಿದಷ್ಟು ಪಂದ್ಯಗಳಲ್ಲಿ ಮನ್ಸೂರ್ ಅಲಿ ಸಾರ್ಥಕ್ಯ ಕಂಡರು.

46 ಟೆಸ್ಟ್ ಪಂದ್ಯಗಳಲ್ಲಿ ಆಡಿ 34.91ರ ಸರಾಸರಿಯಲ್ಲಿ 2793 ರನ್ ಗಳಿಸಿದ್ದ ಅವರ ಬ್ಯಾಟಿಂಗ್ ಅಬ್ಬರದಲ್ಲಿ ಆರು ಶತಕ ಹಾಗೂ ಹದಿನಾರು ಅರ್ಧ ಶತಕಗಳನ್ನು ನೋಡುವ ಅವಕಾಶ ಅಂದಿನ ಕ್ರಿಕೆಟ್ ಪ್ರೇಮಿಗಳಿಗೆ ಸಿಕ್ಕಿತ್ತು. 1968ರಲ್ಲಿ 'ವಿಸ್ಡನ್ ವರ್ಷದ ಕ್ರಿಕೆಟಿಗ' ಗೌರವ ಪಡೆದಿದ್ದ ಪಟೌಡಿ ಕ್ರಿಕೆಟ್ ಆದರ್ಶ ಎನಿಸಿದರು. ಅಷ್ಟೇ ಅಲ್ಲ ಕ್ರಿಕೆಟ್ ತಂಡದ ನಾಯಕ ಹೇಗಿರಬೇಕು ಎನ್ನುವುದಕ್ಕೂ ಮಾದರಿಯಾದರು. ಸ್ಪಿನ್ನರುಗಳ ಮೇಲೆ ಅವರಿಗೆ ವಿಶೇಷ ಮೋಹ. ಅವರಿಂದಲೇ ಪಂದ್ಯ ಗೆಲ್ಲುವ ಛಲ. ಆದ್ದರಿಂದಲೇ ಭಾರತ ತಂಡದ ಶ್ರೇಷ್ಠ ನಾಯಕರ ಪಟ್ಟಿಯಲ್ಲಿ ಅವರಿಗೆ ಈಗಲೂ ಅಗ್ರಸ್ಥಾನ.

ವಿವಾದಗಳಿಂದ ಸದಾ ದೂರವಾಗಿ ಇರುತ್ತಿದ್ದರೂ ಬೇಟೆಯಾಡುವ ಹವ್ಯಾಸದಿಂದಾಗಿ ಪಟೌಡಿ ಸಂಕಷ್ಟದಲ್ಲಿ ಸಿಲುಕಿದ್ದುಂಟು. ಅದು ಅವರ ಜೀವನದ ಒಂದು ಕರಾಳ ಘಟನೆ. ರಕ್ಷಿತ ವನ್ಯಜೀವಿಯಾದ ಕೃಷ್ಣಮೃಗವನ್ನು ಬೇಟೆಯಾಡಿದ ಆರೋಪದಲ್ಲಿ ಎರಡು ದಿನ ಸೆರೆ ವಾಸ ಅನುಭವಿಸಿದ್ದರು. ಆದರೆ ಈ ಘಟನೆಯಿಂದ ಅವರ ವ್ಯಕ್ತಿತ್ವದ ಹೊಳಪೇನೂ ಕುಂದಲಿಲ್ಲ. ಕೊನೆಯವರೆಗೂ 'ಟೈಗರ್' ರೀತಿಯಲ್ಲಿಯೇ ಗತ್ತಿನಿಂದಲೇ ಬದುಕಿದರು!